# <u>ಬಂದು ನಿಂತಿಹ ನೋಡಿ ಭೂತಳದಿ ವೆಂಕಟ</u>

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** In wordings, there are certain differences with that of the singer and each of the above books. Differences in Ref.1 are marked in asterik (*) marks, Ref. 2 are almost matching with the singer. Yellow highlights are as per the Ref. book 2 and also as per the singer.

ಪುರಂದರ ದಾಸರ "ಬಂದು ನಿಂತಿಹ ನೋಡಿ" ಕೃತಿಯು ತಿರುಮಲೆಯಲ್ಲಿ ನಿಂತ ವೆಂಕಟರಮಣನ ಬಣ್ಣಿಸಿ ಕೊಂಡಾಡುತ್ತಿದೆ. ಶ್ರೀ ಹರಿಯು ಭೂ ವೈಕುಂಠವೆಂದೆನಿಸಿದ ತಿರುಮಲೆಗೆ ಲಕ್ಷ್ಮೀ ಸಮೇತ ಬಂದು ನೆಲೆಸಿರುವನು.

ರಾಗ ಮಧ್ಯಮಾವತಿ ತಾಳ ಅಟ್ಟ

ಬಂದು ನಿಂದಿಹ ನೋಡಿ ಭೂತಳದಿ ವೆಂಕಟ
ಇಂದಿರೆಯ ಒಡಗೂಡಿ ಒಪ್ಪುವ ನಿರಂತರ
ಪೊಂದಿ ಭಜನೆಯ ಮಾಡಿ (ಆನಂದಗೂಡಿ) (ಆನಂದ ಬೇಡಿ*) || ಪ ||

ವಂದಿಸುತ ಮನದೊಳಗೆ ಇವನಡಿ
ದ್ವಂದ್ವ ಭಜಿಸಲು ಬಂದ ಭಯಹರ
ಇಂದುಧರ ಸುರ ವೃಂದನುತ ಗೋ-
ವಿಂದ ಘನ ದಯಾ ಸಿಂಧು ಶ್ರೀ ಹರಿ || ಅಪ ||

ದ್ವಾರದೆಡಬಲದಲ್ಲಿ ಜಯ ವಿಜಯರಿಬ್ಬರು
ಸೇರಿ ಸೇವಿಪರಲ್ಲಿ ಸನಕಾದಿನುತ ಶೃಂ
ಗಾರ ನಿಧಿ ಅಂಗದಲ್ಲಿ ಮುತ್ತಿನಲಿ ಶೋಭಿಪ
ಹಾರ ಪೊಂದಿಹುದಲ್ಲಿ ವಿಸ್ತಾರದಲ್ಲಿ
ವಾರ ವಾರಕೆ ಪೂಜೆಗೊಂಬುವ

ಹಾರ ಮುಕುಟಾಭರಣ ಕುಂಡಲ
ಧಾರಿ ಭುಜಕೇಯೂರ ಭೂಷಿತ
ಮಾರಪಿತ ಗುಣ ಮೋಹನಾಂಗ
ಚಾರು ಪೀತಾಂಬರ ಕಟಿ ಕರ
ವೀರ ಕಲ್ಹಾರಾದಿ ಹೂವಿನ
ಹಾರ ಕೊರಳೊಳು ಎಸೆವುತಿರೆ ವದ
ನಾರವಿಂದನು ನಗುತ ನಲಿಯುತ || 1 ||

ಎಲ್ಲ ಭಕುತರ ಭೀಷ್ಟ ಕೊಡುವುದಕೆ ತಾ ಕೈ
ವಲ್ಯ ಸ್ಥಾನವ ಬಿಟ್ಟ ಶೇಷಾದ್ರಿ ಮಂದಿರ
ದಲ್ಲಿ ಲೋಲುಪ ದಿಟ್ಟ ಸೌಭಾಗ್ಯ ನಿಧಿಗೆದುರಿಲ್ಲ
ಭುಜ ಬಲ ಪುಷ್ಟ ಕಸ್ತೂರಿಯಿಟ್ಟ
ಚೆಲ್ವ ಫಣೆಯಲಿ ಶೋಭಿಸುವ ಸಿರಿ
ವಲ್ಲಭನ ಗುಣ ಪೊಗಳದಿಹ ಜಗ
ಖುಲ್ಲರೆದೆದಲ್ಲಣ ಪರಾಕ್ರಮ
ಮಲ್ಲ ಮರ್ದನ (ಮಾತುಳಾರಿ) (ಮಾತುಳಾಂತಕ*)
ಫಲ್ಗುಣನ ಸಖ ಪ್ರಕಟನಾಗಿಹ
ದುರ್ಲಭನು ಅಘದೂರ ಬಹು ಮಾಂ-
ಗಲ್ಯ ಹೃದಯವ ಮಾಡಿ* ಸೃಷ್ಟಿಗೆ
ಉಲ್ಲಾಸ ಕೊಡುತಲಿ ಚಂದದಿಂದಲಿ || 2 ||

ಪದಕ ಕೌಸ್ತುಭಧಾರ ಸರಿಗೆಯ ಸುಕಂಧರ
ಸುದರುಶನ ದರಧಾರ ಸುಂದರ ಮನೋಹರ
ಪದ ಯುಗದಿ ನೂಪುರ ಇಟ್ಟಿಹನು ಸನ್ಮುನಿ
ಹೃದಯ ಸ್ಥಿತ ಗಂಭೀರ ಬಹು ದಾನ ಶೂರ
ವಿಧಿ ಭವಾದ್ಯರ ಪೊರೆವ ದಾತನು
ತುದಿ ಮೊದಲು ಮಧ್ಯವು ವಿರಹಿತನು
ಉದುಭವಾದಿಗಳೀವ ಕರ್ತನು
ತ್ರಿದಶ ಪೂಜಿತ ತ್ರಿಭುವನೇಶ
ಸದು ವಿಲಾಸದಿ ಸ್ವಾಮಿತೀರ್ಥದಿ
ಉದಿಸುತಿರೆ ಸಿರಿ ಮಹಿಳೆ ಸಹಿತದಿ
ಪದುಮನಾಭ ಪುರಂದರ ವಿಠಲನು

ಪ್ರತಿ ವರುಷ ಬ್ರಹ್ಮೋತ್ಸವದಿ ಮೆರೆಯುತ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಇಂದುಧರ** = ಶಿವ

**ಜಯ ವಿಜಯರು** = ವಿಷ್ಣುವಿನ ದ್ವಾರ ಪಾಲಕರು, ಸನಕ ಸನಂದನರು ಶ್ರೀ ಹರಿಯ ದರ್ಶನಕ್ಕೆಂದು ಬಂದಾಗ ಅವರನ್ನು ಇವರು ತಡೆಯಲು ರಾಕ್ಷಸ ಯೋನಿಯಲ್ಲಿ ಹುಟ್ಟಿರೆಂದು ಅವರು ಶಾಪ ಕೊಟ್ಟರು.

**ಅಡಿದ್ವಂದ್ವ** – ಎರಡು ಕಾಲಡಿಗಳು. ಪದದ್ವಂದ್ವ.

**ಇಂದುಧರ ಸುರ ವೃಂದ** – ಚಂದ್ರನನ್ನು ಜಟೆಯಲ್ಲಿ ಧರಿಸಿದ ಶಿವನೇ ಮೊದಲಾದ ದೇವತೆಗಳ ಗುಂಪು.

**ವಾರ ವಾರಕೆ** – ಮೊದಲಿಗೆ ಪ್ರತಿ ಶುಕ್ರವಾರವೂ ದೇವರಿಗೆ ತಿರುಮಂಜನ ಮೊದಲಾದ ವಿಶೇಷ ಪೂಜೆಗಳು ನಡೆಯುವ ವಾಡಿಕೆಯಿದ್ದಿತು; ಈಗಲೂ ವಾರದಲ್ಲಿ ಒಂದು ದಿನ ಮಾತ್ರ (ಶುಕ್ರವಾರ) ತಿರುಮಂಜನ, ಆದರೆ ಉಳಿದಂತೆ ಎಲ್ಲ ಪೂಜೆಗಳೂ ಪ್ರತಿದಿನವೂ ನಡೆಯುತ್ತವೆ.

**ಭುಜ ಕೇಯೂರ** = ಭುಜ ಕೀರ್ತಿ

**ಕರವೀರ** = ಕೆಂಪು ಕಣಗಿಲೆ

**ಕಲ್ಹಾರ** = ತಾವರೆ ಜಾತಿಯ ಕಿರಿಯ ಹೂ

**ಕೈವಲ್ಯ ಸ್ಥಾನವ ಬಿಟ್ಟು** – '... ತ್ಯಕ್ತ್ವಾವೈಕುಂಠಮುತ್ತಮಂ । ಸ್ವಾಮಿ ಪುಷ್ಕರಿಣೀ ತೀರೇ ರಮಯಾ ಸಹ ಮೋದತೇ" ॥ ಎಂಬ ಶ್ಲೋಕದ ಛಾಯೆ.

**ಖುಲ್ಲರೆದೆ ದಲ್ಲಣ** – ಕ್ಷುದ್ರಜನರ ಎದೆಯನ್ನು ತಲ್ಲಣಗೊಳುಸುವವ.

**ಮಾತುಳಾರಿ** – ಕೃಷ್ಣಾವತಾರದಲ್ಲಿ ಕಂಸನನ್ನು ಕೊಂದವನು, ಚಾಣೂರಾದಿ ಮಲ್ಲರನ್ನು ನಿಗ್ರಹಿಸಿದವನು.

**ಮಾತುಳಾಂತಕ** = ಸೋದರ ಮಾವನ ವೈರಿ, ಕೃಷ್ಣ

**ಫಲ್ಗುಣನ ಸಖ** – ಅರ್ಜುನನ ಸ್ನೇಹಿತ, ಕೃಷ್ಣ

**ಅಘದೂರ** – ಪಾಪಗಳಿಂದ ದೂರವಾಗಿರುವವನು.

**ಕೌಸ್ತುಭ** = ದೇವಾ ದಾನವರು ಸಮುದ್ರ ಮಥನ ಮಾಡುವಾಗ ಹುಟ್ಟಿದ ಒಂದು ರತ್ನ. ಅದನ್ನು ದೇವತೆಗಳು ಶ್ರೀ ಹರಿಗೆ ಸಮರ್ಪಿಸಿದರು.

**ಸರಿಗೆ** = ಕೊರಳಿನ ಆಭರಣ

**ಸುಕಂದರ** = ಅಂದವಾದ ಕೊರಳು

**ಸುದರುಶನದರಧಾರ** – ಸುದರ್ಶನವೆಂಬ ಹೆಸರಿನ ಚಕ್ರವನ್ನು (ಸುದರುಶನದ ಅರ) ಹೊತ್ತವನು.

**ವಿಧಿಭ ವಾದ್ಯರ** – ಬ್ರಹ್ಮ, ಶಿವ ಮೊದಲಾದವರನ್ನು.

**ತುದಿ ಮೊದಲು ಮಧ್ಯವು ವಿರಹಿತನು** = ನಾಂತಾಂ ನಮಧ್ಯಂ ನಪುನಸ್ತವಾದಿಂ...(ಭಗವದ್ಗೀತೆ ೧೧ - ೧೬)

**ಉದುಭವ** = ಉದ್ಭವ, ಸೃಷ್ಟಿ

**ಉದುಭವಾದಿಗಳೀವ** – ಉದ್ಭವ ಎಂದರೆ ಸೃಷ್ಟಿ, ಅಭ್ಯುದಯ; ಇದಕ್ಕೆ ಕಾರಣನಾದವನು.

**ತ್ರಿದಶ ಪೂಜಿತ** – ದೇವತೆಗಳಿಂದ ಪೂಜಿಸಲ್ಪಡುವವನು.

**ತ್ರಿಭುವನೇಶ** – ಮೂರು ಲೋಕಗಳಿಗೂ ಒಡೆಯನಾದವನು.

**ಸದು ವಿಲಾಸದಿ** – ಸದ್ವಿಲಾಸದಿಂದ; ಸಾತ್ತ್ವಿಕಗುಣದ ಉತ್ಕರ್ಷೆಯಿರುವ ಲೀಲೆಗಳಿಂದ ಕೂಡಿದ.

**ಸ್ವಾಮಿತೀರ್ಥದಿ...** – ಸ್ವಾಮಿ ಪುಷ್ಕರಿಣಿಯಲ್ಲಿ ಲಕ್ಷ್ಮಿ ಕಾಣಿಸಿಕೊಂಡಳೆಂದು ಇಲ್ಲಿನ ಒಕ್ಕಣೆ. ಆದರೆ ಸ್ಥಳಪುರಾಣದ ಪ್ರಕಾರ ಲಕ್ಷ್ಮಿ ಕಾಣಿಸಿಕೊಂಡುದು ಕೆಳ ತಿರುಪತಿಯ ಪದ್ಮ ಸರೋವರದಲ್ಲಿ, ಅಲರ್‌ಮೇಲ್ ಮಂಗೈಯಾಗಿ. ವರಾಹಾವತಾರದ ಕಾಲದಲ್ಲಿ ಶ್ರೀ ವರಾಹ ದೇವರ ಆಜ್ಞೆಯಂತೆ ಗರುಡನು ಈ ಪುರಷ್ಕರಣಿಯನ್ನು ವರಾಹ ದೇವರ ಸ್ನಾನಕ್ಕಾಗಿ ವೈಕುಂಠದಿಂದ ತಂದನು.

**ಬ್ರಹ್ಮೋತ್ಸವ** = ತಿರುಪತಿಯಲ್ಲಿ ಭಾದ್ರಪದ ಶುಕ್ಲ ಪಕ್ಷದಲ್ಲಿ ಪ್ರಾರಂಭವಾಗಿ ಹತ್ತು ದಿನಗಳವರೆಗೆ ನಡೆಯುವ ಒಂದು ಪ್ರಮುಖ ಉತ್ಸವ. ತೊಂಡಮಾನನು (ಆಕಾಶರಾಜನ ತಮ್ಮ) ಈ ಬ್ರಹ್ಮೋತ್ಸವವನು ಆರಂಭಿಸಿದನೆಂದು ಪುರಾಣಗಳು ಹೇಳುತ್ತವೆ.

**ಸಿರಿ ಮಹಿಳೆ** – ಶ್ರೀದೇವಿ, ಲಕ್ಷ್ಮಿ.

**Classification:** Keerthane
**Ankita:** purandara vittala
**Location:** Tirupati
**Category:** Vishnu aradhane, Vishnu Stuti
**Group Words:** srinivasa, brahma, deva, govinda, vaikunta, hrudaya, chakra, swamytheertha, padma, brahmotsava
**Pravachana:** NA